## ಏಳು ವರ್ಷದವರು ಅಳಬಾರದಾ?

ದೀಪಾವಳಿ ಹಬ್ಬದ ಸಮಯದಲ್ಲಿ ನಡೆದ ಘಟನೆ ಇದು. ಹಬ್ಬದ ಸಂಜೆ ನನ್ನ ಮಗಳ ಮನೆಗೆ ಹೋಗಿದ್ದೆ. ಪಟಾಕಿ ಹಚ್ಚಲು ಹೋಗಿದ್ದ ನನ್ನ ಮೊಮ್ಮಗ ಏಳು ವರ್ಷದ ಚೈತನ್ಯ ಕೈ ಸುಟ್ಟುಕೊಂಡು ಅಳುತ್ತ ಬಂದ. ಕೂಡಲೇ ಅವನನ್ನು ಹತ್ತಿರದ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ವೈದ್ಯರು ಅಂಗೈಗೆ ಔಷಧ ಹಚ್ಚುವಾಗ ನಮ್ಮ ಪುಟ್ಟ ಜೋರಾಗಿ ಅಳಲು ಆರಂಭಿಸಿದ. ಅವರು, 'ಏನೊ ಹೆಸರು? ಎಷ್ಟು ವಯಸ್ಸು ನಿಂಗೆ?' ಎಂದು ಕೇಳಿದರು. 'ಏಳು ವರ್ಷ' ಆತ ಅಳುತ್ತಲೇ ಉತ್ತರಿಸಿದ. 'ಏಳು ವರ್ಷ ಅಂತಿಯ... ಅಳ್ತಿಯಲ್ಲೊ...' ಎಂದರು ವೈದ್ಯರು. 'ಯಾಕೆ? ಏಳು ವರ್ಷ ಆದವರು ಅಳದೇ ನಗಬೇಕಾ?' ಎಂದ ಪುಟ್ಟನ ಉತ್ತರಕ್ಕೆ ವೈದ್ಯರೂ ನಕ್ಕರು.

**ಎಂ. ಮೋಹನ ರಾವ್**





## ಬಿರ್ನಾಯಿ

ಮಿತ್ರರೊಬ್ಬರ ಮನೆಗೆ ಹೋಗಿದ್ದೆ. ಅವರ ಪತ್ನಿ ಯಾವುದೋ ಕೆಲಸದ ಮೇಲೆ ಬೆಳಿಗ್ಗೆಯೇ ಹೊರಗೆ ಹೋಗಿದ್ದರು. ಅಡುಗೆ ಕೆಲಸ ಮಿತ್ರನದ್ದಾಗಿತ್ತು. ನನ್ನೊಂದಿಗೆ ಮಾತನಾಡುತ್ತ ಅಡುಗೆ ಮಾಡುತ್ತಿದ್ದ. ಅವರ ಪುಟ್ಟ ಪಾಪು ಮನೆಯಲ್ಲಿತ್ತು. ಸ್ವಲ್ಪ ಸಮಯದ ನಂತರ ಅವರ ಪತ್ನಿ ಮನೆಗೆ ಬಂದರು. ಕೂಡಲೇ ಅವರ ಬಳಿ ಓಡಿ ಹೋದ ಪಾಪು, 'ಅಮ್ಮ, ನೋಡಲ್ಲಿ ಅಪ್ಪ ಬಿರ್ನಾಯಿ ಮಾಡ್ತಾ ಇದ್ದಾರೆ...' ಎಂದಿತು. ಅಡುಗೆ ಮನೆಯಿಂದ ಘಮ ಮೂಗಿಗೆ ಬಡಿದಾಗಲೇ ಗೊತ್ತಾಗಿದ್ದು. 'ಬಿರಿಯಾನಿ' ಮಗನ ಬಾಯಿಯಲ್ಲಿ 'ಬಿರ್ನಾಯಿ' ಆಗಿದೆ ಅಂತ.

**ನಗರ ಗುರುದೇವ ಭಂಡಾರ್ಕರ**